ವಿಷಯ :– ಉರ್ದು ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ಶಿಕ್ಷಕರ ಹುದ್ದೆ ಖಾಲಿ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 649 (1011)

ಶ್ರೀ ಸಿ. ಆರ್. ಸಗೀರ್ ಅಹ್ಮದ್ (ಚಿಕ್ಕಮಂಗಳೂರು) :– ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉರ್ದು ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ಶಿಕ್ಷಕರ ಹುದ್ದೆ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಹುದ್ದೆಗಳನ್ನು ತುಂಬಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಇ) ಈ ದಿನದವರೆಗೆ ಎಷ್ಟು ಹುದ್ದೆಗಳು ಖಾಲಿ ಇದೆ, ಮತ್ತು ಈ ಖಾಲಿ ಹುದ್ದೆಗಳನ್ನು ಯಾವಾಗ ತುಂಬಲಾಗುವುದು ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) :–

ಅ) ಇಲ್ಲ.

ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ :– ಪ್ರಾಥಮಿಕ ಶಾಲಾ ಶಿಕ್ಷಕರ ವರ್ಗಾವಣೆಯಿಂದ ತೊಂದರೆಯಾಗಿರುವ ಬಗ್ಗೆ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 651 (1029)

ಶ್ರೀ ಎಂ. ರಾಮಪ್ಪ (ಬಳ್ಳಾರಿ) :– ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಇತ್ತೀಚೆಗೆ ಸರ್ಕಾರ ಮಾಡಿದ ಪ್ರಾಥಮಿಕ ಶಾಲಾ ಶಿಕ್ಷಕರ ವರ್ಗಾವಣೆಯ ಪ್ರಯುಕ್ತ ಬಳ್ಳಾರಿ ನಗರದ ಈ ಕೆಳಕಂಡ ತೆಲುಗು ಶಾಲೆಗಳು ಹಾಗೂ ಇತರೆ ಶಾಲೆಗಳು ತೆಲುಗು ಬೋಧಿಸುವ ಶಿಕ್ಷಕರ ಕೊರತೆಯಿಂದ ಸದರಿಯವರ ಜಾಗಕ್ಕೆ ಕನ್ನಡ ಶಿಕ್ಷಕರನ್ನು ನೇಮಿಸಿದ ಕಾರಣ ತೊಂದರೆಗೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

1) ಎ. ಟಿ. ರಸ್ತೆ, ಬಳ್ಳಾರಿ

2) ಕೆ. ಸಿ. ಕಾಲೋನಿ ಮಾದರಿ ಶಾಲೆ,

3) ರೈಲ್ವೆ ಕಾಲೋನಿ ಪ್ರಾಥಮಿಕ ಶಾಲೆ.

ಆ) ಈ ಶಾಲೆಗಳಲ್ಲಿ 1 ರಿಂದ 7 ನೇ ತರಗತಿ ವರೆಗೆ ತೆಲುಗು ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಹಾಗೂ ಈ ಶಾಲೆಗಳಲ್ಲಿಯ ತೆಲುಗು ಬೋಧಿಸುತ್ತಿರುವ ಶಿಕ್ಷಕರ ಸಂಖ್ಯೆಯನ್ನು ಸರ್ಕಾರ ನೀಡುವುದೇ?

ಇ) ಕೆಲಸವೇ ಇಲ್ಲದ ಕಡೆ ವರ್ಗಾಯಿಸಿರುವ ಈ ಹೆಚ್ಚುವರಿ ಶಿಕ್ಷಕರ ಸಂಖ್ಯೆ ಎಷ್ಟು ?

ಈ) ತೆಲುಗು ಬೋಧಿಸುವ ಶಿಕ್ಷಕರನ್ನು ಈ ಶಾಲೆಗಳಿಗೆ ಒದಗಿಸಲು ಸರ್ಕಾರ ಕೈಗೊಂಡ ಕ್ರಮವೇನು? ಮತ್ತು ಯಾವಾಗ ಮಾಡಲಾಗುವುದು ?

ಉ) ಶಿಕ್ಷಕರು ಇದ್ದರೂ ಈ ಶಾಲೆಗಳಿಗೆ ಶಿಕ್ಷಕರನ್ನು ತೈನಾತಿಸದೆ ಹೋದ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮಂತ್ರಿಗಳು) :

ಅ) ಬಂದಿಲ್ಲ.

ಆ) ಅನುಬಂಧ 'ಎ' ನೋಡಿ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಪ್ರಶ್ನೆ ಉದ್ಭವಿಸುವುದಿಲ್ಲ.

ANNEXURE 'A'

Name of the Schools	Classwise strength							Total	No. of sanctioned posts of Telugu teachers	No. of Telugu Teachers working
	1	2	3	4	5	6	7			
1) GMHPS,S.T.Street Bellary	31	28	40	41	52	35	42	269	7	7
2) GMHPS,SKG.Colony, Bellary	22	14	11	11	18	12	16	104	5	5
3) GHPS,Railway Colony, Bellary	22	26	19	18	23	—	—	108	3	3

ವಿಷಯ :– ಬೆಂಗಳೂರಿನಲ್ಲಿ ಪತ್ರಿಕಾ ಭವನವನ್ನು ಕಟ್ಟುವುದಕ್ಕಾಗಿ ನಿವೇಶನ ಮಂಜೂರು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 652 (1270)

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) :– ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರವು ಬೆಂಗಳೂರಿನಲ್ಲಿ ಪತ್ರಿಕಾ ಭವನವನ್ನು ಕಟ್ಟುವುದಕ್ಕಾಗಿ ನಿವೇಶನವನ್ನೇನಾದರೂ ಮಂಜೂರು ಮಾಡಿದೆಯೇ ?

ಆ) ಹಾಗಿದ್ದರೆ, ನಿವೇಶನದ ಸುತ್ತಳತೆ ಮತ್ತು ಯಾವ ಸ್ಥಳದಲ್ಲಿ ಮಂಜೂರು ಮಾಡಿದೆ ?

ಇ) ಇಲ್ಲದಿದ್ದರೆ, ಸರ್ಕಾರವು ನಿವೇಶನವನ್ನು ಯಾವಾಗ ಮಂಜೂರು ಮಾಡುವುದು ?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :–

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಸರ್ಕಾರದ ಮುಂದೆ ಅಂತಹ ಪ್ರಸ್ತಾವನೆ ಯಾವುದು ಇಲ್ಲ.

ವಿಷಯ :– ಮುಳಬಾಗಿಲು ಪಟ್ಟಣದಲ್ಲಿ ನೀರು ಸರಬರಾಜು ಯೋಜನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 660 (688)

ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು) :– ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ಮುಳಬಾಗಿಲು ಪಟ್ಟಣದಲ್ಲಿ ಸುಮಾರು ರೂ. 25.00 ಲಕ್ಷ ರೂಪಾಯಿಗಳ ನೀರು ಸರಬರಾಜು ಯೋಜನೆಯೊಂದನ್ನು ಜಾರಿಗೆ ತರಲು ತಾಲ್ಲೋಕು ಶಾಸಕರಿಂದ ಮನವಿ ಸರ್ಕಾರಕ್ಕೆ ಸಲ್ಲಿಸಿದ್ದಾರೆಯೇ ?

2) ಹಾಗಿದ್ದಲ್ಲಿ ಸದರಿ ಯೋಜನೆಯನ್ನು ಕಾರ್ಯಗೊಳಿಸುವಲ್ಲಿ ನಿಧಾನವಾಗಲು ಕಾರಣವೇನು ?

3) ಪಟ್ಟಣದ ನೀರಿನ ಭವಣೆಯನ್ನು ನೀಗಿಸಲು ಕೂಡಲೇ ಸದರಿ ಯೋಜನೆಯನ್ನು ಕೈಗೆತ್ತಿಕೊಳ್ಳುವರೇ ?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :–

1) ಹೌದು.